ಸ್ಕೂಲು ಬಿಟ್ಟ ಕೂಡಲೇ ಓಡಿಕೊಂಡೇ ಮನೆಗೆ ಬಂದಿದ್ದ. ಹೊತ್ತು ಮುಳುಗುವ ಹೊತ್ತಿಗೆ ಬಂದ ಅವ್ವ ಉಡಿಯಲ್ಲಿ ಕಟ್ಟಿಕೊಂಡು ಬಂದ ಸೊಪ್ಪನ್ನು ನೆಲದ ಮೇಲೆ ಸುರಿದು ಉಸ್ಸೆನ್ನುತ್ತ ಗೋಡೆಗೆ ಒರಗಿ ಕೂತು ಮಗನ ಮುಖ ನೋಡಿದ್ದಳು. 'ಈ ಅಜ್ಜನ ಫೋಟೊ ನಮ್ಮ ಸ್ಕೂಲಲ್ಲೂ ಇದೆ. ಅವರು ನಮ್ಮಜ್ಜ ಆಗಿದ್ರೆ, ಅವರ ಫೋಟೊ ಸ್ಕೂಲಲ್ಲಿ ಯಾಕಿರುತ್ತೆ? ಅವರು ನಮ್ಮಜ್ಜ ಅಲ್ಲ. ನೀನು ಸುಳ್ಳು ಹೇಳ್ತಿದ್ದೀಯ...' ಅನ್ನುತ್ತ ಮುಖ ನೋಡಿದ ಮಗನಿಗೆ ಏನು ಹೇಳಬೇಕು ಅನ್ನೋದು ತಾಯಮ್ಮನಿಗೆ ತಕ್ಷಣಕ್ಕೆ ಗೊತ್ತಾಗದೆ ಸ್ವಲ್ಪ ಹೊತ್ತು ಸುಮ್ಮನಿದ್ದಳು.

'ಮಗಾ, ಅವರು ನಿನ್ನೊಬ್ಬನಿಗೇ ಅಜ್ಜ ಅಲ್ಲ. ಬಡವರ ಮಕ್ಕಳಿಗೆಲ್ಲ ಅಜ್ಜ. ಅವರ ಮನೆಯಲ್ಲೂ ಬಡತನವಿತ್ತು. ಸಣ್ಣವರಿದ್ದಾಗ ಅವರೂ ತುಂಬಾನೇ ಕಷ್ಟಪಟ್ಟರಂತೆ! ಸ್ಕೂಲಿಗೆ ಹೋಗಿ ಚೆನ್ನಾಗಿ ಓದಿ ಬುದ್ಧಿವಂತರಾದರು. ಬಡವರ ಮಕ್ಕಳೆಲ್ಲ ಓದಿ ದೊಡ್ಡವರಾಗಬೇಕು ಅಂತ ಅವರು ಹೇಳ್ತಿದ್ದರಂತೆ. ಅವರು ನಮ್ಮ ಪಾಲಿಗೆ ದೇವರಿದ್ದಂಗೆ. ಅವರು ಇಲ್ಲದಿದ್ರೆ ನಾವೆಲ್ಲ ಏನಾಗ್ತಿದ್ವೊ...' ಅಂತ ಹೇಳುವಾಗ ಅವಳ ಗಂಟಲು ಉಬ್ಬಿಬಂದು ಕೆಲ ಕ್ಷಣಗಳು ಮಾತು ಹೊರಡಲಿಲ್ಲ. ಹೊಲದಲ್ಲಿ ದುಡಿದು ಬಂದ ಅವ್ವನಿಗೆ ನೀರು ಕೊಡೋದು ಮರೆತು ಅಜ್ಜನ ವಿಷಯ ಕೇಳಿ ಬೇಜಾರು ಮಾಡಿದೆ ಅಂತ ಪೇಚಾಡಿಕೊಂಡದ್ದೂ ಅವನಿಗೆ ನೆನಪಾಯಿತು. ಅಜ್ಜನ ಹಾಗೆ ಚೆನ್ನಾಗಿ ಓದಬೇಕು. ಒಳ್ಳೆಯ ಕೆಲಸಕ್ಕೆ ಸೇರಿಕೊಳ್ಳಬೇಕು. ಸಂಬಳ ತಂದು ಅವ್ವನ ಕೈಗೆ ಕೊಡಬೇಕು. ಈ ಹಳೆಯ ಮನೆ ಕೆಡವಿಸಿ ಇನ್ನೂ ದೊಡ್ಡದು ಕಟ್ಟಿಸಬೇಕು. ಅವ್ವನ್ನ ಕೂಲಿ ಕೆಲಸಕ್ಕೆ ಹೋಗಬೇಡ ಅನ್ನಬೇಕು. ಅಣ್ಣನ್ನ ಜೀತದಿಂದ ಬಿಡಿಸಬೇಕು ಅಂತ ಅಂದುಕೊಂಡಿದ್ದೆಲ್ಲ ನೆನಪಾಯಿತು.

ಈಗ ಕೆಲಸ ಸಿಗುವ ಸುದ್ದಿ ಬಂದಿದೆ. ಆದರೆ, ಅವ್ವನೇ ಇಲ್ಲ. ಅವ್ವನ ಮಣ್ಣಿಗೆ ಬಂದ ಮಾವಂದಿರು ಅಣ್ಣನನ್ನು ಜೀತದಿಂದ ಬಿಡಿಸಿ ಅವನ ಜತೆಗೆ ಅಪ್ಪನನ್ನೂ ಅವರ ಊರಿಗೇ ಕರೆದುಕೊಂಡು ಹೋದರು. ಆಮೇಲೆ ಊರ ನಂಟು ತಪ್ಪಿಹೋಗಿತ್ತು. ಅಣ್ಣ, ಅಪ್ಪ ನೆಂಟರ ಮನೆಯಲ್ಲಿದ್ದಾರೆ. ಊರಲ್ಲಿರೊ ಮನೆ ಬಿದ್ದು ಹೋಗಿದೆ. ಎಲ್ಲಾದರೂ ಸಾಲ ಮಾಡಿಯಾದರೂ, ಒಂದೆರಡು ಎಕರೆ ಹೊಲ ಖರೀದಿ ಮಾಡಿ ಅಪ್ಪ, ಅಣ್ಣನ್ನ ಬೇಸಾಯ ಮಾಡಿಕೊಂಡು ಊರಲ್ಲೇ ಇರಿ ಅಂತ ಹೇಳಬೇಕು ಅನ್ನಿಸಿತು. ಅವ್ವ ಇದ್ದಿದ್ದರೆ ಇಬ್ಬರೂ ಊರಲ್ಲೇ ಇರುತ್ತಿದ್ದರು. ಅವ್ವನ ಸಾವಿನ ಜತೆ ಊರು, ಮನೆ ಎರಡೂ ಇಲ್ಲವಾದವು ಅನ್ನಿಸಿ ಮನಸ್ಸು ಭಾರವಾಯಿತು. ಟೇಬಲ್ ಮೇಲೆ ಇರಿಸಿದ್ದ ಅಜ್ಜನ ಫೋಟೊ ನೋಡಿದ. ಕಣ್ಣಲ್ಲಿ ನೀರು ತುಂಬಿಕೊಂಡಿದ್ದರಿಂದ ಅಜ್ಜನ ಮುಖ ಅಸ್ಪಷ್ಟವಾಗುತ್ತ ಹೋಗಿ ಕಲಸಿಕೊಂಡಿತು.

ನಾಲ್ಕನೇ ಕ್ಲಾಸಿನವರೆಗೆ ಓದಿದ್ದ ಅವ್ವ, ಬಾಬಾ ಸಾಹೇಬರ ಬಗ್ಗೆ ಅಲ್ಪಸ್ವಲ್ಪ ತಿಳಿದುಕೊಂಡಿದ್ದಳು. ಎಲ್ಲಿಂದಲೋ ಅವರ ಫೋಟೊ ತಂದು ಮನೆಯ ಗೋಡೆಗೆ ನೇತುಹಾಕಿದ್ದಳು. ಆಗಾಗ ಫೋಟೊ ತೋರಿಸಿ ಇವರು ನಿನ್ನ ಅಜ್ಜ... ನೀನು ಓದಿ ಅವರಂತೆ ಆಗಬೇಕು ಅಂತ ಹೇಳುತ್ತ ನನ್ನಲ್ಲಿ ಓದುವ ಛಲ ಹುಟ್ಟಿಸಿದ್ದು ಸಣ್ಣ ವಿಷಯ ಅಲ್ಲ. ಅವ್ವನಿಗೆ ಬಾಬಾ ಸಾಹೇಬರ ಬಗ್ಗೆ ಗೊತ್ತಿಲ್ಲದಿದ್ದರೆ ನಂಗೆ ಓದು ಅಂತ ಹೇಳ್ತಿರಲಿಲ್ಲ ಅನ್ನಿಸಿ ಅವಳ ಮಾತುಗಳು ಎದೆಯಲ್ಲಿ ಉಳಿದುಬಿಟ್ಟಿವೆ ಅನ್ನಿಸಿತು.

★★★

ಊರವರ ಹೊಲಗಳಲ್ಲಿ ಕಳೆ ಕೀಳುವಾಗ ಕಣ್ಣಿಗೆ ಬಿದ್ದ ಅರಿವೆ, ಕಿರ್ಕಸಾಲೆ, ಗೋಣಿಸೊಪ್ಪಿನ ಕುಡಿಗಳನ್ನು ಚಿಗುಟಿ ಉಡಿಗೆ ತುಂಬಿಕೊಂಡು ಬರುತ್ತಿದ್ದ ಅವ್ವ, ಸೊಪ್ಪನ್ನೆಲ್ಲ ಸೋಸಿ ಒಂದು ಹಿಡಿಯಷ್ಟು ಬೇಳೆ ಹಾಕಿ ಹದವಾಗಿ ಬೇಯಿಸಿ ಸಾರು ಮಾಡಿ, ಮುದ್ದೆಗೆ ಎಸರಿಟ್ಟು, ಹಿಟ್ಟು, ನುಚ್ಚು ಹಾಕಿ ಅದು ಬೇಯುವ ಹೊತ್ತಿಗೆ ಜಗುಲಿ ಮೇಲೆ ಮಲಗಿರುತ್ತಿದ್ದ ಅಪ್ಪನನ್ನು ಎಬ್ಬಿಸಿ, ಓದುತ್ತ ಕೂತಿದ್ದ ನನ್ನ ಕೈ ತೊಳೆಸಿ ಇಬ್ಬರನ್ನೂ ತಟ್ಟೆ ಮುಂದೆ ಕೂರಿಸಿ ಹೊಟ್ಟೆ ತುಂಬಾ ಉಣಿಸುವವರೆಗೆ ಅವಳಿಗೆ ಸಮಾಧಾನ ಇರುತ್ತಿರಲಿಲ್ಲ. 'ಇದೆಂತ ಸಾರು? ಬರೀ ಸೊಪ್ಪು, ಬೇಳೆನೇ ಹಾಕಿಲ್ಲ. ಮುದ್ದೆಗೆ